ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 5, November-December 2023, Pp. 1-11
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ದುರುಗಮುರುಗಿಯರ ಸಾಮಾಜಿಕತೆಯ ಒಂದು ಅಧ್ಯಯನ (ಹಾವೇರಿ ಜಿಲ್ಲೆಯನ್ನು ಅನುಲಕ್ಷಿಸಿ)

**ಡಾ. ಎಲ್. ಈಶ್ವರಪ್ಪ**
ಪ್ರಾಂಶುಪಾಲರು, ಎಸ್.ಜೆ.ಎಂ. ಕಲಾ & ವಾಣಿಜ್ಯ ಕಾಲೇಜು, ಚಿತ್ರದುರ್ಗ.

***Abstract:***
*ದುರುಗಮುರಗಿಯರು ಇಂದಿಗೂ ಅಸಮಾನತೆ ಮತ್ತು ಅಸ್ಪೃಶ್ಯತೆಯ ನೋವುಗಳನ್ನು ಅನುಭವಿಸುತ್ತಿದ್ದಾರೆ. ಇತರೆ ಸಮುದಾಯದವರಂತೆ ಮುಕ್ತವಾಗಿ ಜೀವನ ನಡೆಸಲು ಆಗುತ್ತಿಲ್ಲ. ಒಳಗೊಳಗೆ ಸಾಮಾಜಿಕ ಹಿಂದುಳಿಯುವಿಕೆ ಅವರಿಗೆ ನೋವಾಗಿ ಕಾಡುತ್ತಿದೆ. ಅನ್ಯ ಸಮಾಜಗಳು ಇವರಿಂದ ಕೇವಲ ಮನೋರಂಜನೆ ಪಡೆಯುತ್ತಾರೆ ವಿನಃ ಅವರ್‍ಯಾರು ಕೂಡ ತಮ್ಮವರೆಂಬ ಮನೋಭಾವವನ್ನು ಹೊಂದಿರುವುದಿಲ್ಲ. ಅಮಾಯಕರಾದ ದುರುಗಮುರುಗಿಯರು ಮುಗ್ಧರು, ಸೌಮ್ಯ ಸ್ವಭಾವದ ನಿರುಪದ್ರವಿಗಳು, ಮೋಸಗಾರರಲ್ಲ, ಕಪಟಿಗಳಲ್ಲ, ಅವರ ಸತ್ಯ, ಸಾಹಸ, ಕಲೆ, ಮುಗ್ಧತೆ, ವಿಶ್ವಾಸ, ನಂಬಿಕೆ, ಪ್ರಾಮಾಣಿಕತೆ, ಸಹನೆ ಮೊದಲಾದವುಗಳು ಮಾನವ ಸಮುದಾಯ ಸುಖ ಮತ್ತು ನೆಮ್ಮದಿಯಿಂದ ಬದುಕಲು ಮಾರ್ಗದರ್ಶಿಯಾಗಿವೆ. ದುರುಗಮುರುಗಿಯರಲ್ಲಿರುವ ಕೆಲವು ಅನಿಷ್ಟ ಪದ್ಧತಿಗಳನ್ನು ತೊಡೆದು ಹಾಕಿ ಸಂಘ, ಸಂಸ್ಥೆ ಹಾಗೂ ಸರಕಾರಗಳು ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕಿದೆ. ದುರುಗಮುರುಗಿಯರ ಆರ್ಥಿಕ ಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿ ಕೂಲಿಕೆಲಸ, ಕಟ್ಟಡ ಕೆಲಸ, ಸಣ್ಣಪುಟ್ಟ ವ್ಯಾಪಾರ, ಹಮಾಲಿ ಕೆಲಸ, ಹೋಟೆಲಿನಲ್ಲಿ ಕಪ್ಪುಬಸಿ ತೊಳೆಯುವ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.*

***Keywords:*** *ಬುಡಕಟ್ಟು, ಅಲೆಮಾರಿ, ಅರೆ–ಅಲೆಮಾರಿ, ದುರುಗಮುರುಗಿ ಸಮುದಾಯ, ಸಾಮಾಜಿಕತೆ.*

## ಪೀಠಿಕೆ

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್ ಹೀಗೆ ಅನೇಕ ಧರ್ಮಗಳು ವಿಭಿನ್ನ ಸಂಸ್ಕೃತಿಗಳನ್ನು ಅಳವಡಿಸಿಕೊಂಡು ತಮ್ಮ ನೆಲೆಯನ್ನು ಕಂಡುಕೊಂಡಿರುವುದು ವಾಸ್ತವ. ಬಹಳಷ್ಟು ವರ್ಷಗಳಿಂದಲೂ ಮೇಲ್‌ಸ್ತರದಲ್ಲಿರುವ ಕೆಲವೇ ಸಮಾಜಗಳು ಮುಂಚೂಣಿಯಲ್ಲಿದ್ದೂ, ಅಂತಹ ಸಮಾಜಗಳ ಸಂಸ್ಕೃತಿಯೇ ಶ್ರೇಷ್ಟ ಎಂಬ ಮನೋಭಾವ ಒಂದು ಕಾಲದಲ್ಲಿತ್ತು. ಆದರೆ ಈಗ ಮಾನವಶಾಸ್ತ್ರ, ಸಮಾಜಶಾಸ್ತ್ರ, ಜಾನಪದ ಹಾಗೂ ಇನ್ನಿತರ ಅಧ್ಯಯನಕಾರರ ಸೂಕ್ಷ್ಮದೃಷ್ಟಿಯ ತಳಸ್ಪರ್ಶಿ (subaltern) ಅಧ್ಯಯನದಿಂದಾಗಿ ಅನೇಕ ಅನಾಥ ಮತ್ತು ಕೆಳಸ್ತರದಲ್ಲಿರುವ ಸಮುದಾಯಗಳ ಮತ್ತು ಅಲೆಮಾರಿ ಬುಡಕಟ್ಟುಗಳ ಬದುಕು ಕೂಡ ವಿಶಿಷ್ಟ ಮತ್ತು ಅನನ್ಯ ಎಂಬುದನ್ನು ದರ್ಶನ ಮಾಡಿಸಿದ್ದಾರೆ.

ಕರ್ನಾಟಕದಲ್ಲಿ ಸುಮಾರು ಐವತ್ತಕ್ಕೂ ಹೆಚ್ಚು ಬುಡಕಟ್ಟು ಸಮುದಾಯಗಳು ವಾಸವಾಗಿರುವುದು ಕಂಡುಬರುತ್ತದೆ. ಬುಡಕಟ್ಟುಗಳು ಅಲೆಮಾರಿಗಳಾದರೂ, ಕರ್ನಾಟಕದ ನೆಲದಲ್ಲಿ ಅಲ್ಲಲ್ಲಿ ಕೆಲವು ಕಾಲ ವಸತಿ ಇದ್ದೂ, ನಂತರ ಮುಂದಿನ ಸ್ಥಳಕ್ಕಾಗಿ ಆ ಜಾಗ ಖಾಲಿ ಮಾಡುತ್ತಿರುತ್ತಾರೆ. ಅನ್ನ, ನೀರು

***Please cite this article as:*** ಈಶ್ವರಪ್ಪ ಎಲ್. (2023). ದುರುಗಮುರುಗಿಯರ ಸಾಮಾಜಿಕತೆಯ ಒಂದು ಅಧ್ಯಯನ (ಹಾವೇರಿ ಜಿಲ್ಲೆಯನ್ನು ಅನುಲಕ್ಷಿಸಿ). *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(5), 1–11

ಹುಡುಕಿಕೊಂಡು ಅಲೆಯುವ ಮಂದಿಯಲ್ಲಿ 'ದುರುಗಮುರಗಿ'ಯವರದು ಒಂದು ಪಂಗಡ. ಸಾಮಾನ್ಯವಾಗಿ ಭಿಕ್ಷೆಯನ್ನೆ ಅವಲಂಬಿಸಿ ಬದುಕುತ್ತಿರುವ ಈ ಮಂದಿ ತಮ್ಮದೆ ಆದ ವಿಶಿಷ್ಟ ಸಂಸ್ಕೃತಿಯನ್ನು ರೂಢಿಸಿಕೊಂಡಿದ್ದಾರೆ.

ದುರುಗಮ್ಮ, ಮರುಗಮ್ಮ ಇವರಿಬ್ಬರೂ ಕರ್ನಾಟಕದಲ್ಲಿ ಕೆಳಜಾತಿ ಜನರ ಗ್ರಾಮದೇವತೆಗಳು, ದುರುಗಮ್ಮ ದುರ್ಗೆಯ ಗ್ರಾಮ್ಯ ರೂಪವಾಗಿದ್ದರೆ, ಮರುಗಮ್ಮ ಮಾರಿದೇವತೆಯ ಗ್ರಾಮ್ಯ ರೂಪವಾಗಿದ್ದಾಳೆ. ದುರುಗಮ್ಮ ಆಂಧ್ರ, ಕರ್ನಾಟಕ ಗಡಿಭಾಗದಲ್ಲಿ ತುಂಬಾ ಪ್ರಸಿದ್ಧ ದೇವತೆ. ಬಳ್ಳಾರಿಯ ದುರುಗಮ್ಮಳಂತೂ ಸುಪ್ರಸಿದ್ಧ ದೇವತೆಯಾಗಿದ್ದಾಳೆ. ಬೀದರ್, ಗುಲ್ಬರ್ಗಾ, ವಿಜಾಪುರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಮರುಗಮ್ಮ ದೇವತೆಯ ಪ್ರಭಾವವಿದೆ. ಹಳೆ ಮೈಸೂರು ಭಾಗದಲ್ಲಿ ನಡೆಯುವ ಮಾರಿ ಜಾತ್ರೆ, ಶಿರಸಿಯ ಮಾರಿಕಾಂಬ ಜಾತ್ರೆ, ರಾಣೇಬೆನ್ನೂರಿನ ಚೌಡಮ್ಮ ಜಾತ್ರೆ ಇವುಗಳೆಲ್ಲ ಮಾರಿ ದೇವತೆಯ ರೂಪಗಳೆಂದು ಹೇಳಬಹುದು. ಈ ಇಬ್ಬರು ದೇವತೆಗಳ ಆರಾಧನೆಯನ್ನು ವೃತ್ತಿಯಾಗಿಸಿಕೊಂಡ ಸಮುದಾಯವನ್ನು ದುರುಗಮುರುಗಿಯರೆಂದು ಗುರುತಿಸಲಾಗಿದೆ.

**ಸಮುದಾಯದ ಹೆಸರು ಮತ್ತು ಜನಸಂಖ್ಯೆ**

ಈ ಸಮುದಾಯದವರು ಕರ್ನಾಟಕದ ಉದ್ದಗಲಕ್ಕೂ ಧಾರ್ಮಿಕ ಭಿಕ್ಷೆ ಬೇಡಿಕೊಂಡು ಅಲೆಮಾರಿ ಜೀವನ ಸಾಗಿಸುವಂಥವರು. ಇತ್ತೀಚೆಗೆ ಕೆಲವು ಕಡೆ ನೆಲೆ ನಿಂತು ಜೀವನ ಸಾಗಿಸುತ್ತಿದ್ದಾರೆ. ಇವರು ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಕಂಡು ಬರುತ್ತಿದ್ದು ಅವರನ್ನು ಆಯಾ ಪ್ರದೇಶಗಳಲ್ಲಿ ವಿಭಿನ್ನ ಹೆಸರುಗಳಿಂದ ಗುರುತಿಸಲಾಗುತ್ತದೆ. ಆದರೆ, ಈ ಎಲ್ಲಾ ಹೆಸರುಗಳು ದೇವರನ್ನು ಹೊತ್ತುಕೊಂಡು ಅವರು ನಡೆಸುವ ಭಿಕ್ಷಾಟನೆಯ ವೃತ್ತಿಯನ್ನು ಸೂಚಿಸುವಂಥವುಗಳಾಗಿವೆ. ಇವರನ್ನು ಸಿಂಧೋಳ್, ಬುರ್ರಬುರ್ರ ಸುಂಕಲಮ್ಮ, ಬುರ್ರ ಮಾರಿಯರ್, ಬುಟ್ಟಿ ಕೂಗಮ್ಮ, ಕೂಗಮ್ಮನ ಆಡಿಸುವವರು, ಪೋತ್ಯಾ, ಪೆಟ್ಟಿಗೆ ಪೂಜಾರಿ, ಭಿಕ್ಷುಕರು ಎಂಬ ಇತ್ಯಾದಿ ಹೆಸರುಗಳಿಂದ ಕರೆಯುವುದುಂಟು.

ಭಾರತದ ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಸಿಂಧೋಳ್, ಚಿಂದೊಳ್ಳು, ಪೆದ್ದಮ್ಮವಾಂಡ್ಲು, ದೇವರ ವಾಂಡ್ಲು, ದುರ್ಗಮುರ್ಗಾ ಎಂಬ ಪದಗಳು ಪರಿಶಿಷ್ಟ ಜಾತಿಯಲ್ಲಿ ಪರಿಗಣಿಸಿರುವುದರಿಂದ, ಜನಗಣತಿಗಳಲ್ಲಿ ಇವರ ಜನಸಂಖ್ಯೆ ನಿಖರವಾಗಿ ದಾಖಲಿಸಲಾಗಿಲ್ಲ. ಕರ್ನಾಟಕದಲ್ಲಿ 2001ರ ಜನಗಣತಿಯಲ್ಲಿ ದಾಖಲಾಗಿರುವ ಪ್ರಕಾರ ಪ್ರಾಧಿಕಾರದ 2007ರ ಸಮೀಕ್ಷೆಯ ಅಂಕಿ ಅಂಶಗಳಲ್ಲಿ ದುರುಗಮುರುಗಿ (ಸಿಂಧೋಳ್ಳು) ಸಮುದಾಯದ ಎಲ್ಲಾ ಕಳ್ಳುಬಳ್ಳಿಯವರನ್ನು ಒಳಪಡಿಸಲಾಗಿದೆ. ಹೀಗಾಗಿ ರಾಜ್ಯದ 21 ಜಿಲ್ಲೆಗಳಲ್ಲಿ ಲಭ್ಯವಾದ ಜನಸಂಖ್ಯೆ 5726. ಇದರಲ್ಲಿ ಮಹಿಳೆಯರು 2587 ಪುರುಷರು 3139 ಇದ್ದಾರೆ. ಒಟ್ಟು 1421 ಕುಟುಂಬಗಳು ದಾಖಲಾಗಿವೆ. ಇವರು ಹಾವೇರಿ ಜಿಲ್ಲೆಯ ಒಟ್ಟು 6 ತಾಲೂಕುಗಳ 16 ನೆಲೆಗಳಲ್ಲಿ ಕಂಡುಬರುತ್ತಾರೆ. ಇಲ್ಲಿರುವ ಜನಸಂಖ್ಯೆ ಎಂದರೆ 836. ಇವರಲ್ಲಿ ಪುರುಷರು 439 ಮತ್ತು ಮಹಿಳೆಯರು 397 ಇದ್ದಾರೆ. ಒಟ್ಟು 182 ಕುಟುಂಬಗಳು ಇವೆ ಎಂಬುದು ಆ ಸಮುದಾಯದ ಹಿರಿಯ ಮುಖಂಡರುಗಳು ನೀಡಿದ ಮಾಹಿತಿಯ ಮೂಲಕ ತಿಳಿದು ಬರುತ್ತದೆ. ಆದರೆ ಇಲ್ಲಿ ತಿಳಿಸಿರುವ ಜನಸಂಖ್ಯೆ ಮತ್ತು ಕುಟುಂಬಗಳ ಸಂಖ್ಯೆಯೇ ಅಂತಿಮವೆಂದು ಭಾವಿಸಬಾರದು. ಕಾರಣ ದುರುಗಮುರಗಿಯರು ಭಿಕ್ಷಾಟನೆಗಾಗಿ ಊರಿಂದೂರಿಗೆ ಅಲೆದಾಡುವ ಸಮುದಾಯವಾದ್ದರಿಂದ ಈ ಅಂಕಿ ಸಂಖ್ಯೆಗಳಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರಬಹುದು. ಆದಾಗ್ಯೂ, ಸಮೀಕ್ಷೆಗಾಗಿ ಕ್ಷೇತ್ರಕಾರ್ಯಕ್ಕೆ ಹೋದಾಗ ಯಾವುದೇ ನಿರ್ವಂಚನೆಯಿಲ್ಲದೆ, ಪ್ರಾಮಾಣಿಕವಾಗಿ ಸಮೀಕ್ಷೆ ನಡೆಸಲಾಗಿದೆ.

**ದುರುಗಮುರುಗಿಯರ ಲಕ್ಷಣಗಳು**

ದುರುಗಮುರುಗಿಯರು ಜೀವನೋಪಾಯಕ್ಕಾಗಿ ಊರಿಂದ ಊರಿಗೆ ಅಲೆಯುವ ಅಲೆಮಾರಿಗಳಾಗಿದ್ದಾರೆ. ಭಿಕ್ಷೆ ಬೇಡುತ್ತಾ ಊರೂರು ಅಲೆಯುವ ಇವರು ಊರುಗಳ ಹೊರಭಾಗದ ಪ್ರದೇಶಗಳಾದ ಶಾಲಾಮೈದಾನ, ಸಂತೆಮೈದಾನ, ಸ್ಮಶಾನದ ಪಕ್ಕದಲ್ಲಿ, ಇಲ್ಲವೇ ಸರ್ಕಾರದ ಬಯಲು ಮತ್ತು ಗುಡ್ಡ ಪ್ರದೇಶಗಳಲ್ಲಿ ವಾಸಿಸಲು ಗುಡಾರಗಳನ್ನು ಅಥವಾ ಟೆಂಟುಗಳನ್ನು ರಚಿಸಿಕೊಳ್ಳುತ್ತಾರೆ. ಪ್ರತಿ ಗುಡಾರದ ನೆಲೆಗಳಲ್ಲೊಂದು ಪ್ರತ್ಯೇಕವಾದ ದೇವರ ಗುಡಾರವನ್ನು ದೇವತೆಗಳಿಗಾಗಿ ಮೀಸಲಿರಿಸಲಾಗುತ್ತದೆ. ತಮ್ಮ ದೈನಂದಿನ ಚಟುವಟಿಕೆಗಳಾದ ಊಟ, ಸ್ನಾನ, ಮಲಗುವುದು ಮತ್ತು ವೃತ್ತಿಗಳು ಈ ಗುಡಾರಗಳಲ್ಲಿಯೇ ನಡೆಯುತ್ತವೆ. ದುರುಗಮುರಗಿಯರ ಮೂಲ ಭಾಷೆ ತೆಲುಗು. ಇಂದಿಗೂ ಅವರು ಎಲ್ಲಿಯೇ ಇರಲಿ, ಅವರ ಮನೆ ಮಾತು ಮಾತ್ರ ತೆಲುಗು. ಜನ ಮಾತು ನಮ್ಮಲ್ಲಿ ಕನ್ನಡ. ಆಯಾ ಪ್ರದೇಶಕ್ಕೆ ಹೋದಂತೆಲ್ಲ ಆಯಾ ಪ್ರದೇಶದ ಭಾಷೆಯನ್ನೇ ಕಲಿತು ಮಾತನಾಡುತ್ತಾರೆ.

ವಿವಾಹದಲ್ಲಿ ಗಂಡಿಗೆ ಹೆಣ್ಣನ್ನು ನೋಡುವ, ನಿಶ್ಚಯಿಸುವ ಕಾರ್ಯವನ್ನು ಮನೆಯ ಹಿರಿಯರೇ ಮಾಡುತ್ತಾರೆ. ಸಾಮಾನ್ಯವಾಗಿ ಹೆಣ್ಣನ್ನು ತಮ್ಮ ಹತ್ತಿರದ ರಕ್ತ ಸಂಬಂಧಿಗಳಲ್ಲಿ ನೋಡುವುದು ಹೆಚ್ಚು. ಇವರಲ್ಲಿ ಹೆಚ್ಚಾಗಿ ಬಾಲ್ಯವಿವಾಹ ಪದ್ಧತಿ ಇದೆ. ಹರೆಯದಲ್ಲಿಯೇ ಗಂಡ ತೀರಿ ಕೊಂಡರೆ ಹೆಣ್ಣಿಗೆ ಮತ್ತೊಂದು ಮದುವೆ ಮಾಡುವ ಪದ್ಧತಿ ಇವರಲ್ಲಿದೆ. ಇದನ್ನು 'ಸೀರುಡಿಕೆ' ಎಂದು ಕರೆಯುತ್ತಾರೆ. ಬೇರೆ ಸಮುದಾಯಗಳಲ್ಲಿ ಗರ್ಭಿಣಿ ಸ್ತ್ರೀ ತವರಿಗೆ ಕರೆದುಕೊಂಡು ಹೋಗುತ್ತಾರೆ ಆದರೆ ದುರುಗಮುರಗಿಯರಲ್ಲಿ ಗರ್ಭಿಣಿ ಸ್ತ್ರೀ ತವರಿಗೆ ಹೋಗುವುದಿಲ್ಲ. ದುರುಗಮುರಗಿಯರು ಮೂಲದಲ್ಲಿ ಬೇಟೆಯನ್ನಾಡುತ್ತಿದ್ದರು ಎಂಬುದನ್ನು ಗಮನಿಸಿದರೆ ಇವರು ಮಾಂಸಹಾರಿಗಳು ಎನ್ನುವುದು ಗೊತ್ತಾಗುತ್ತದೆ. 'ದೇವಿ ಆಟ'ವನ್ನು ವೃತ್ತಿಯಾಗಿಸಿಕೊಂಡ ಮೇಲೂ ಬೇಟೆಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಮೀನು ಬೇಟೆ ಇವರಿಗೆ ಪಾರಂಪರಿಕವಾದದು. ಮೀನು ಬೇಟೆಯ ಜೊತೆಗೆ ಮುಂಗುಸಿ, ಪಾರಿವಾಳ, ಕಾಡುಬೆಕ್ಕು, ಮೊಲ, ಹಕ್ಕಿಪಿಕ್ಕಿ ಮುಂತಾದವುಗಳನ್ನು ಬೇಟೆ ಮಾಡುವುದುಂಟು. ಮುಖ್ಯವಾಗಿ ದುರ್ಗಾದೇವಿ ಹೊತ್ತು ಭಿಕ್ಷಾಟನೆಯನ್ನೇ ಅವಲಂಬಿಸಿರುವ ಈ ಅಲೆಮಾರಿ ಸಮುದಾಯಕ್ಕೆ ಕೃಷಿ ಭೂಮಿಯೇ ಇಲ್ಲ. ಇತ್ತೀಚೆಗೆ ಈ ಸಮುದಾಯದ ಯುವಕ–ಯುವತಿಯರು ಪ್ಲಾಸ್ಟಿಕ್ ಕೊಡಗಳನ್ನು, ಅಲ್ಯೂಮಿನಿಯಂ ಪಾತ್ರೆಗಳನ್ನು ಮತ್ತು ಇನ್ನಿತರ ಸ್ಟೇಷನರಿಗಳನ್ನು ಅಂಗಡಿಗಳಿಂದ ಪಡೆದು ಹಳ್ಳಿಗಳಿಗೆ ಹೋಗಿ ಮಾರುವುದುಂಟು. ಅಲ್ಪ ಪ್ರಮಾಣದಲ್ಲಿ ಕೆಲವರು ಕುರಿ–ಮೇಕೆಗಳನ್ನು ಸಾಕಾಣಿಕೆ ಮಾಡುತ್ತಿದ್ದಾರೆ. ನಾಟಿ ಕೋಳಿಗಳನ್ನು ತಮ್ಮ ಆಹಾರಕ್ಕಾಗಿ ಸಾಕುವುದುಂಟು. ಸಾಕಿದ ಕೋಳಿಗಳು ಹೆಚ್ಚಾದಾಗ ಸಂತೆಗಳಿಗೆ ಒಯ್ದು ಮಾರುವುದುಂಟು.

ದುರುಗಮುರುಗಿಯರು ತಮ್ಮದೇ ಆದ ನ್ಯಾಯ ಪದ್ಧತಿಯನ್ನು ರೂಢಿಸಿಕೊಂಡು ಬಂದಿದ್ದಾರೆ. ಇಂದಿಗೂ ತಮ್ಮ ಸಮಸ್ಯೆಗಳನ್ನು ಪಂಚಾಯಿತಿ ಮೂಲಕವೇ ಬಗೆಹರಿಸಿಕೊಳ್ಳುತ್ತಾರೆ. ಕುಟುಂಬದ ಒಳಗೆ, ಹೊರಗೆ ಯಾವುದೇ ರೀತಿಯ ಜಗಳ, ಭಿನ್ನಾಭಿಪ್ರಾಯ, ಸಮಸ್ಯೆಗಳಿಗೆ ಕುಲದ ಮುಖ್ಯಸ್ಥನಾದ ಪೂಜಾರಿ (ಪೋತರಾಜ) ಪರಿಹಾರ ಕಂಡು ಕೊಳ್ಳುತ್ತಾನೆ. ನ್ಯಾಯಧೀಶನ ಸ್ಥಾನವನ್ನು ಇವರಲ್ಲಿ ಪೂಜಾರಿ ವಹಿಸಿರುತ್ತಾನೆ. ಅವನು ನೀಡುವ ನ್ಯಾಯ ತೀರ್ಮಾನವನ್ನು ಜನರು ದೈವ ಸಮಾನವೆಂದು ತಿಳಿಯುತ್ತಾರೆ. ಅವನ ಮಾತೇ ಕೊನೆಯ ಮಾತಾಗಿರುತ್ತದೆ. ಈತನನ್ನು "ನ್ಯಾಯಗಾಡು" ಎಂದು ಕರೆಯುವುದುಂಟು.

**ಪೌರಾಣಿಕ ಹಿನ್ನೆಲೆ**

ಡಾ. ಚಂದ್ರಶೇಖರ ಕಂಬಾರರು ಹೇಳುವಂತೆ ಈ ಜನಾಂಗದ ಅಧಿದೇವತೆಯಾಗಿರುವ ದುರುಗಮ್ಮ

ಮರಗಮ್ಮ ಪಾರ್ವತಿ ದೇವಿಯ ಅಂಶವೆಂಬುದನ್ನು ಈ ಜನಾಂಗದವರೇ ಒಪ್ಪಿಕೊಳ್ಳುತ್ತಾರೆ. ಅಲ್ಲದೆ ತಮ್ಮ ದೇವತೆ ಆದಿ ಶಕ್ತಿಯ ಅವತಾರ ಎನ್ನುವುದು ಅವರ ಗಟ್ಟಿ ನಂಬಿಕೆ.

ದುರ್ಗೆ ಆದಿಶಕ್ತಿಯ ರೂಪ ತಾಳಿ ದುರ್ಗಮನೆಂಬ ಅಸುರನನ್ನು ಕೊಂದದ್ದು ಪುರಾಣ ಪ್ರಸಿದ್ಧವಾಗಿದೆ. ಈ ದುರ್ಗ/ದುರ್ಗಮನೆಂಬ ರಾಕ್ಷಸ ಪುರುಷರಿಂದ ಸಾಯದಂತೆ ವರವನ್ನೂ ಪಡೆದು ಲೋಕ ಕಂಟಕನಾಗಿದ್ದಾಗ, ಬ್ರಹ್ಮನ ಕೋರಿಕೆಯ ಮೇರೆಗೆ ಕಾಳ ರಾತ್ರಿಯ ಮೂಲಕ ದುರ್ಗನನ್ನು ತನ್ನಲ್ಲಿಗೆ ಬರಮಾಡಿ ಅವನೊಂದಿಗೆ ಯುದ್ಧಮಾಡಿ ಕೊಂದಳು ಎಂಬುದು ಪುರಾಣ ಕಥೆ. ಇದನ್ನು ಸರಿಸಿಯೇ ಪೂಜಾರಿ ಗಂಡಸು ಚಾಟಿಯಿಂದ ತನ್ನ ದೇಹ ದಂಡಿಸಿಕೊಳ್ಳುತ್ತಾ ದೇವಿಯನ್ನು ಆರಾಧಿಸುವುದಕ್ಕೆ ಚಾಲನೆ ದೊರಕಿರಬೇಕು. ಲಡ್ಡಿನಿಂದ/ಚಾಟಿಯಿಂದ ಹೊಡೆದುಕೊಳ್ಳುವುದು ಮಾತ್ರವಲ್ಲ ಮುಂಗೈ ಮೇಲೆ ಚೂಪಾದ ಕತ್ತಿ ಆಡಿಸಿ ರಕ್ತ ಚಿಮ್ಮಿಸುವುದರಿಂದ ದೇವಿ ತೃಪ್ತಿ ಪಡುತ್ತಾಳೆ ಎಂದು ನಂಬಲಾಗಿದೆ. ದುರಗಮುರಗಿಯರ ಪೂಜಾರಿ ಹೀಗೆ ಚಾಟಿಯಿಂದ ಹೊಡೆದುಕೊಳ್ಳುವುದೂ, ಮತ್ತು ರಕ್ತ ಚಿಮ್ಮಿಸುವುದರಿಂದ ತಾಯಿ ಶಕ್ತಿ ಉಳ್ಳಾಕೆ ನಮಗೆ ಯಾವ ರೀತಿಯ ನೋವು ಉಂಟು ಮಾಡುವುದಿಲ್ಲವೆಂಬುದು ಈ ಜನಾಂಗದ ನಂಬುಗೆಯಾಗಿದೆ. ದೇಹ ದಂಡನೆಯ ಮೂಲಕ ತಾವು ಆರಾಧಿಸುವ ದೇವರನ್ನು ಒಲಿಸಿಕೊಳ್ಳಬಹುದೆಂಬ ಭಾವನೆ ತುಂಬಾ ಪ್ರಾಚೀನವಾಗಿದೆ. ಸಿಡಿ ಆಡುವುದು, ಕೆಂಡ ಹಾಯುವಿಕೆ, ಮುಳ್ಳು ಪಾದುಕೆಗಳ ಮೇಲೆ ನಿಲ್ಲುವುದು, ಗಲ್ಲಕ್ಕೆ ಡಬ್ಬಳ ಚುಚ್ಚಿಕೊಳ್ಳುವುದು ಮುಂತಾದ ಉಗ್ರ ಆಚರಣೆಗಳನ್ನು ದೇವೋಪಾಸನೆಯ ವಿವಿಧ ಪ್ರಕಾರಗಳೆಂದೇ ಪರಿಗಣಿಸಲಾಗುತ್ತದೆ.

**ಐತಿಹಾಸಿಕ ಹಿನ್ನೆಲೆ**

ಹಿಂದೆ ರಾಜರು, ಪಾಳೆಯಗಾರರೆಲ್ಲ ದುರ್ಗ ಅಥವಾ ಕೋಟೆ ಕಟ್ಟಿಕೊಳ್ಳುತ್ತಿದ್ದರು. ಆ ದುರ್ಗಕ್ಕೆ ಒಬ್ಬ ದೇವತೆ ಹುಟ್ಟಿಕೊಂಡಳು. ಆ ದುರ್ಗಕ್ಕೆ ದೇವತೆಯಾದವಳೇ ದುರುಗಮ್ಮ. ಆ ದುರ್ಗಮ್ಮ ಮರ್ಗಮ್ಮನ ಆರಾಧಕರೇ ದುರಗ ಮುರಗಿಯರು. ಹಿಂದೆಲ್ಲ ಈ ದೇವತೆಯ ಪೂಜಾ ಕಾರ್ಯವೆಲ್ಲ ಇದೇ ಮಂದಿ ನೆರವೇರಿಸುತ್ತಿದ್ದಿರಬಹುದು. ಕ್ರಮೇಣ ಅವರಿಗೆ ಈ ಹೆಸರು ರೂಢಿಯಾಗಿರಬೇಕು.

**ಇದುವರೆಗಿನ ಅಧ್ಯಯನಗಳು**

ವೃತ್ತಿಗಳು ಜಾತಿಗಳಾಗಿ ಪರಿವರ್ತನೆಗೊಂಡ ಸಂದರ್ಭದ ಕುರುಹುಗಳಾಗಿ ದುರುಗ ಮುರುಗಿ, ಬಹುರೂಪಿ, ಕಮ್ಮಾರ ಮತ್ತು ಮಡಿವಾಳದಂತಹ ಜನಾಂಗಗಳಿವೆ. ಇವೆಲ್ಲ ಮೂಲದಲ್ಲಿ ಯಾವ ಜಾತಿ ಅಥವಾ ಮತಕ್ಕೆ ಸೇರಿದ್ದವೆಂದು ಗುರುತಿಸುವುದು ತುಂಬಾ ಕಷ್ಟ. “ಕನ್ನಡ ಜಾನಪದ ವಿಶ್ವಕೋಶ” ದಲ್ಲಿ ದುರುಗ ಮುರುಗಿಯರ ಮೂಲಕ್ಕೆ ಸಂಬಂಧಿಸಿ ಈ ವಿವರಣೆಯಿದೆ:

ದುರುಗಮುರುಗಿಯರು ಉತ್ತರದಿಂದ ಬಂದವರೆಂದೂ, ದ್ರಾವಿಡರ ಗುಂಪಿಗೆ ಸೇರಿದವರೆಂದೂ ಅಭಿಪ್ರಾಯಗಳಿವೆ. ಇವರು ದ್ರಾವಿಡರ ಗುಂಪಿಗೆ ಸೇರಿದವರಾದ್ದರಿಂದ ದಕ್ಷಿಣದವರಿರಬೇಕೆಂಬ ವಾದವೂ ಇದೆ. ಇವರನ್ನು ‘ಕುರುಬ’ ಜನಾಂಗಕ್ಕೆ ಸೇರಿದವರೆಂತಲೂ ಹೇಳುತ್ತಾರೆ. ಕುರುಬರಲ್ಲಿ ಊರುಕುರುಬ, ಅಡವಿಕುರುಬ, ಎಂಬ ಎರಡು ಪಂಗಡಗಳಿವೆ. ಅಡವಿ ಕುರುಬರಲ್ಲಿ ಶಾಸ್ತ್ರ ಹೇಳುವವರು ಕವಲೆತ್ತಿನವರು, ಬಾಳ ಸಂತೋಷರು, ದುರುಗಮುರುಗಿಯವರು ಎಂಬ ಪಂಗಡಗಳಾಗಿ ವಿಂಗಡಿಸಿ ಬೇರೆ ಬೇರೆ ವೃತ್ತಿಗಳನ್ನು ಕೈಗೊಂಡರೆಂದೇ ಹೇಳುವುದುಂಟು. ಇನ್ನೊಂದು ವಾದದಂತೆ ದುರ್ಗಮ್ಮ ಮುರ್ಗಮ್ಮನನ್ನು ಕೆಳವರ್ಗದವರು ಬುಟ್ಟಿಯಲ್ಲಿಟ್ಟುಕೊಂಡು ಬೀದಿ ಬೀದಿಗೂ ಹೋಗಿ ಈ ದೇವತೆ ಶಾಪ ಹಾಕುತ್ತಾಳೆಂದು ಜನರಲ್ಲಿ ಭಯ ಹುಟ್ಟಿಸಿ ಅವರಿಂದ ದವಸ ಧಾನ್ಯಗಳನ್ನು ಪಡೆದು ಜೀವನ ಸಾಗಿಸುತ್ತಿದ್ದರೆಂದು ತಿಳಿದು ಬರುತ್ತದೆ.

ಇದೇ ಮಾತನ್ನು ಗೀತಾ ನಾಗಭೂಷಣ ಅವರೂ ಒಪ್ಪಿದಂತಿದೆ. ಅವರ ಕೃತಿ ‘ದುರುಗ ಮುರುಗಿ

ಸಂಸ್ಕೃತಿ' ಇದರಲ್ಲಿ ಇವರ ಮೂಲವನ್ನು ಕುರಿತು 'ದುರುಗಮುರಗಿಯವರೆಂದರೆ ದುರ್ಗಮ್ಮ ಮರಗಮ್ಮನ ಆರಾಧಕರು ಎಂದು ದಾಖಲಿಸಲಾಗಿದೆ. ಇಲ್ಲಿ ದುರುಗ ಅಂದರೆ ದುರ್ಗಾದೇವಿ ಮತ್ತು ಮರಗಮ್ಮ ಎಂದರೆ ಪಾರ್ವತಿ ಎಂದು ಅರ್ಥೈಸಲಾಗಿದೆ. ಆದರೆ ಅದು ಮೊದಲು ದುರುಗ ಎಂದಿರಬೇಕು. ಮುಂದೆ 'ದು' ಕಾರವು 'ಮು'ಕಾರಗಿ ಮುರಗಿ ಎಂದಾಗಿರಬಹುದೆಂದು ಇವರು ಅಭಿಪ್ರಾಯ ಪಡುತ್ತಾರೆ.

ಈ ಸಮುದಾಯ ಕುರಿತು ಹಲವು ಮಾಹಿತಿಗಳನ್ನು ಒಳಗೊಂಡ ಪುಸ್ತಕವೆಂದರೆ ಕೆ.ಎಸ್.ಸಿಂಗ್ ಅವರ 'The Scheduled Caste'' ಎಂಬ ಕೃತಿ. ಇವರ ಪ್ರಕಾರ 'ಸಿಂಧೋಳ್ಳು (ದುರುಗಮುರಗಿ) ಸಮುದಾಯ ಮಾದಿಗ ಸಮುದಾಯಕ್ಕೆ ಸೇರಿದ್ದಾರೆ. ಇವರು ಮದ್ದಲೆ ಹಾಗೂ ತಮಟೆ ಬಾರಿಸುತ್ತ ರಾಮಯಣ, ಮಹಾಭಾರತ, ಅಂಕಲಮ್ಮನ ಕಥೆಗಳನ್ನು ಬೀದಿಗಳಲ್ಲಿ ಅಭಿನಯಿಸುವರಾಗಿದ್ದಾರೆ. ಆಂಧ್ರ ಪ್ರದೇಶದಲ್ಲಿ ಈ ಜನರನ್ನು ಸಿಂಧವಾಳ್ಳು, ಚಿಂಧೋಳು ಎಂದು ಕರೆಯಲಾಗುತ್ತದೆ.

ಕೆ.ಆರ್. ದುರ್ಗಾದಾಸ್ ಅವರು ದುರುಗ ಮುರಗಿಯರ ಕುರಿತು ಲೇಖನವನ್ನು ರಚಿಸಿದ್ದಾರೆ. ಇವರು ಜಿಲ್ಲೆಯಲ್ಲಿ ಈ ಸಮುದಾಯದ ಕ್ಷೇತ್ರಕಾರ್ಯ ಮಾಡಿ ತಮ್ಮ ಮಾಹಿತಿಯನ್ನು ನೀಡಿದ್ದಾರೆ. 'ದುರುಗಮುರುಗಿಯವರು ದೇವಿಯನ್ನು ಹೊತ್ತು ಆಟವಾಡುತ್ತ ಅಲೆಯುವ ಅಲೆಮಾರಿ ಜನಾಂಗದವರಾಗಿದ್ದಾರೆ. ಮೂಲತಃ ಆಂಧ್ರದವರೆಂದು ಹೇಳಿಕೊಳ್ಳುವ ಇವರು ಬಹಳ ಹಿಂದೆಯೇ ಕರ್ನಾಟಕಕ್ಕೆ ವಲಸೆ ಬಂದಿದ್ದಾರೆ.

ಡಾ. ಮಂಜುನಾಥ ಬೇವಿನಕಟ್ಟಿ ಅವರು 'ದುರುಗಮುರಗಿಯವರು ತಮ್ಮ ವೃತ್ತಿಗಾಗಿ ಊರೂರು ಅಲೆಯುವ ಸಂದರ್ಭದಲ್ಲಿ 'ಕಾಲೂರಿದ್ದೇ ನೆಲ' ಎಂಬಂತೆ ನಿಗದಿತವಾದ ನೆಲೆ ಇಲ್ಲ. ಭಿಕ್ಷಾಟನೆಗಾಗಿ ಯಾವುದಾದರೊಂದು ಊರನ್ನು ಆಯ್ದುಕೊಂಡು ತಮ್ಮ ಸಹ ಪರಿವಾರದೊಂದಿಗೆ ಪ್ರಯಾಣ ಬೆಳೆಸುತ್ತಾರೆ. ಊರ ಹತ್ತಿರದ ಬಯಲಲ್ಲಿ ಬಿಡಾರವನ್ನು ಹೂಡುತ್ತಾರೆ. ಕತ್ತೆಗಳ ಮೇಲೆ ಹೇರಿರುವ 'ಸಂಚಾರಿ ಬಿಡಾರ' ವನ್ನು ಕೆಳಗಿಳಿಸಿ ಕ್ಷಣಾರ್ಧದಲ್ಲಿ ಬಿಡಾರ ಸಿದ್ಧಗೊಳಿಸುವ ಚತುರರು, ಬಿಡಾರದ ಪಕ್ಕದಲ್ಲಿ ಕತ್ತೆ, ಹಂದಿ, ನಾಯಿಗಳ ಹಟ್ಟಿಯೂ ರೂಪುಗೊಳ್ಳುತ್ತದೆ. ದುರುಗಮ್ಮನ ಸಂಚಾರಿ ಗುಡಿ, ಢಕ್ಕೆಯ ವಾದ್ಯ, ಪಾತ್ರೆ, ಪಡುಗ, ಬಟ್ಟೆ ಬರೆ, ಚಾಪೆ ಇವುಗಳಿಂದ ಬಿಡಾರ ತುಂಬುತ್ತಾರೆ. ಅಂಗಳದಲ್ಲಿ ಕಲ್ಲುಗುಂಡು ಹೂಡಿ ಒಲೆ ಸಿದ್ಧಪಡಿಸುತ್ತಾರೆ. ಅವಕಾಶ ಸಿಕ್ಕರೆ ಗುಡಿಗುಂಡಾರ, ಧರ್ಮಶಾಲೆ, ಚಾವಡಿಗಳಲ್ಲಿಯೂ ತಂಗುವುದುಂಟು.

ಅರ್ಜುನ ಗೋಳಸಂಗಿ ಅವರ ಪ್ರಕಾರ ಉತ್ತರ ಕರ್ನಾಟಕದ ಬಹುತೇಕ ಅಲೆಮಾರಿ ವೃಂದದ ಮನೆಮಾತು ತೆಲುಗು ಆಗಿರುವುದು ಕಂಡುಬರುತ್ತದೆ. ಉದಾಹರಣೆ ವಡ್ಡರು, ಹೆಳವರು, ದುರುಗ ಮುರಗಿ, ಕೊಂಡಮಾಮಗಳು ಇತ್ಯಾದಿ. ಮೂಲತಃ ಈ ಗುಂಪಿನವರು ಆಂಧ್ರ ಪ್ರದೇಶದಿಂದ ಕರ್ನಾಟಕದ ಅನೇಕ ಭಾಗಗಳಲ್ಲಿ ವೃತ್ತಿಗಾಗಿ ಆಗಾಗ ಬಂದು ಹೋಗುತ್ತಿದ್ದರು. ಕಾಲಾಂತರದಲ್ಲಿ ಇವರುಗಳು ತಮ್ಮ ಅನುಕೂಲಕ್ಕಾಗಿ ಕರ್ನಾಟಕದ ವಿವಿಧ ಕಡೆಗಳಲ್ಲಿ ನೆಲೆ ನಿಂತಂತೆ ತೋರುತ್ತದೆ ಎಂದು ಹೇಳುತ್ತಾರೆ.

**ಅಧ್ಯಯನ ವ್ಯಾಪ್ತಿ**

ಕರ್ನಾಟಕದ ಒಟ್ಟು 21 ಜಿಲ್ಲೆಗಳ 64 ತಾಲೂಕುಗಳಲ್ಲಿ ಕಂಡು ಬರುವ ಎಲ್ಲಾ ದುರುಗಮುರುಗಿಯರನ್ನು ಈ ಸಂಶೋಧನೆಯಲ್ಲಿ ಗಣನೆಗೆ ತೆಗೆದುಕೊಂಡಿಲ್ಲ. ಕಾರಣ, ನನ್ನ ಅಧ್ಯಯನ ಕ್ಷೇತ್ರ ಹಾವೇರಿ ಜಿಲ್ಲೆಯನ್ನು ಅನುಲಕ್ಷಿಸಿರುವುದರಿಂದ, ಈ ಜಿಲ್ಲೆಯಲ್ಲಿರುವ ದುರುಗಮುರಗಿಯರನ್ನು ಮಾತ್ರ ಸ್ಯಾಂಪಲ್ ಸರ್ವೆ ಮೂಲಕ ಆಯ್ಕೆ ಮಾಡಿಕೊಳ್ಳಲಾಗಿದೆ. ಆ ಪ್ರಕಾರ, ಜಿಲ್ಲೆಯಲ್ಲಿನ ವಿವಿಧ ತಾಲೂಕುಗಳ ಹಳ್ಳಿಗಳಲ್ಲಿ ನೆಲೆಸಿರುವ ದುರುಗಮುರುಗಿಯರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಮಾಹಿತಿ

ಸಂಗ್ರಹಿಸಲಾಗಿದೆ. ಅದಕ್ಕೋಸ್ಕರ ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಆಡೂರು, ಕಾಲ್ವೇಕಲ್ಲಾಪುರ, ನರೇಗಲ್, ಬೆಳಗಾಲ ಪೇಟೆ, ಚಿಕ್ಕಾಂಶಿ ಹೊಸೂರು, ಹಾನಗಲ್, ಶಿಗ್ಗಾಂವ ತಾಲೂಕಿನ ಶಿಗ್ಗಾಂವ ನಗರ ಮತ್ತು ಲಕ್ಕಿಕೊಪ್ಪ, ಬ್ಯಾಡಗಿ ತಾಲೂಕಿನ ಬಡಮಲ್ಲಿ, ಕಾಗಿನೆಲೆ, ಹಿರೇಕೆರೂರು ತಾಲೂಕಿನ ಮಾಸೂರು ಮತ್ತು ರಟ್ಟಿಹಳ್ಳಿ, ರಾಣೇಬೆನ್ನೂರು ತಾಲೂಕಿನ ಮೇಡ್ಲೇರಿ, ಸವಣೂರು ತಾಲೂಕಿನ ಹುಲಗೂರು ಮತ್ತು ಸವಣೂರು ಪಟ್ಟಣವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

**ಅಧ್ಯಯನದ ಉದ್ದೇಶಗಳು**

1. ದುರುಗಮುರುಗಿಯರ ಸಮುದಾಯದ ಸಾಮಾಜಿಕ ಸ್ಥಿತಿಗತಿಗಳನ್ನು ತಿಳಿಯಲು ಈ ಅಧ್ಯಯನವನ್ನು ಮಾಡಲಾಗಿದೆ.
2. ಜನಪದರು ಇವರನ್ನು ನಾನಾ ಹೆಸರುಗಳಿಂದ ಕರೆಯುತ್ತಿರುವುದರಿಂದ ಈ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕೋ ಅಥವಾ ಪಂಗಡಕ್ಕೆ ಸೇರಿಸಬೇಕೋ ಎನ್ನುವ ಗೊಂದಲದಲ್ಲಿದ್ದಾರೆ. ಇದಕ್ಕೆ ಪರಿಹಾರ ಕಂಡುಕೊಳ್ಳಬೇಕಿದೆ.
3. ಇವರ ಬದುಕು ಅಲೆಮಾರಿತನದಾದ್ದರಿಂದ, ಶಿಕ್ಷಣದಿಂದಲೂ ವಂಚಿತರಾಗಿದ್ದಾರೆ.
4. ಇವರನ್ನು ಒಕ್ಕಲೆಬ್ಬಿಸುವ ಸರ್ವ ಪ್ರಯತ್ನಗಳು ಭೂ ಮಾಲೀಕರಿಂದ ಮತ್ತು ಸರಕಾರದಿಂದ ಸತತವಾಗಿ ನಡೆಯುತ್ತವೆ. ಇದರಿಂದ ಇವರಿಗೆ ಮಾನಸಿಕ ಹಿಂಸೆಯಾಗುತ್ತಿದೆ.
5. ದುರುಗಮುರುಗಿಯರ ವೃತ್ತಿ ಭಿಕ್ಷಾಟನೆಯಾದ್ದರಿಂದ, ಮತ್ತು ಕೃಷಿ ಜಮೀನು ಇಲ್ಲದ್ದರಿಂದ, ಸ್ವ–ಉದ್ಯೋಗಕ್ಕಾಗಿ ರಾಷ್ಟ್ರೀಕೃತ ಬ್ಯಾಂಕುಗಳು ಸಾಲ ನೀಡಲು ಹಿಂದೇಟು ಹಾಕುತ್ತಿವೆ.

**ದುರುಗಮುರುಗಿಯರ ಸಾಮಾಜಿಕ ಬದುಕು ಮತ್ತು ಬವಣೆ**

ಸಾಮಾಜಿಕವಾಗಿ ತುಂಬಾ ಕೆಳಸ್ತರದಲ್ಲಿರುವ ದುರುಗಮುರಗಿಯರು ಭಿಕ್ಷಾಟನೆಯಿಂದಾಗಿಯೇ ಜೀವನ ಸಾಗಿಸುವಂಥವರು. ಊರ ಹೊರಭಾಗಗಳಲ್ಲಿ ಇವರು ತಾತ್ಕಾಲಿಕವಾಗಿ ಗುಡಾರಗಳನ್ನು ರಚಿಸಿಕೊಳ್ಳುತ್ತಾರೆ. ಅಲೆಮಾರಿ ಸಮುದಾಯದ ಇವರು ಸಾಮಾನ್ಯವಾಗಿ ತಮ್ಮ ದೇವರ ಪುಟ್ಟಿಗಳೊಂದಿಗೆ ಊರಿಂದೂರಿಗೆ ಅಲೆಯುತ್ತಾರೆ. ಭಿಕ್ಷಾಟನೆಯಿಂದ ಬಂದ ಸಿದ್ಧ ಪದಾರ್ಥಗಳನ್ನೇ ಆಹಾರವಾಗಿ ಬಳಸುತ್ತಾರೆ. ಭಿಕ್ಷೆಯಲ್ಲಿ ದೊರೆಯುವ ಅಕ್ಕಿ ಇತ್ಯಾದಿ ಧಾನ್ಯಗಳಿಂದ ಅಡುಗೆ ಮಾಡಿಕೊಳ್ಳುವುದುಂಟು. ಗುಡಾರದ ಹೊರಭಾಗದ ಬಯಲಿನಲ್ಲಿ ಕಲ್ಲುಗುಂಡುಗಳನ್ನು ಬಳಸಿ ಒಲೆ ರಚಿಸಿಕೊಳ್ಳುತ್ತಾರೆ. ಗುಡಾರದ ಹೊರತಾಗಿ ಧರ್ಮ ಛತ್ರಗಳಲ್ಲಿಯೂ ಇವರು ನೆಲೆಸುವುದುಂಟು. ಒಂದು ಊರಿನಲ್ಲಿ ಭಿಕ್ಷಾಟನೆ ಮಾಡುವುದು ಮುಗಿದ ನಂತರ ಮುಂದಿನ ಊರಿಗೆ ತೆರಳುತ್ತಾರೆ. ಹಾಗೆ ಸಂತೆ, ಜಾತ್ರೆಗಳಲ್ಲಿಯೂ ಭಿಕ್ಷಾಟನೆ ಮಾಡುವುದು ಕಂಡುಬರುತ್ತದೆ. ದನ, ಕರು, ಕೋಳಿ, ಹುಂಜ, ಕುರಿ, ಮೇಕೆ ಸಾಕಾಣಿಕೆಯು ಇವರಲ್ಲಿದೆ.

**ಆಹಾರ ಪದ್ಧತಿ**

ಬೇರೆ ಬುಡಕಟ್ಟಿನವರಂತೆ ದುರುಗಮುರಗಿಯರೂ ಹಿಂದೆಲ್ಲ ಬೇಟೆಯನ್ನೇ ಆಹಾರದ ಮೂಲವನ್ನಾಗಿ ಮಾಡಿಕೊಂಡಿದ್ದರು. ಹಂದಿ, ಚಿಗರೆ, ಮೊಲ, ನರಿ, ಮುಂಗಲಿ, ಪಾರಿವಾಳ, ಕಾಡು ಬೆಕ್ಕು, ಹಕ್ಕಿ ಪಿಕ್ಕಿಗಳು ಮೊದಲಾದುವನ್ನು ಬೇಟೆಯಾಡಿ ತರುತ್ತಿದ್ದರು. ಅವುಗಳ ಮಾಂಸವನ್ನು ಸುಟ್ಟು, ಕುದಿಸಿ ತಿನ್ನುತ್ತಿದ್ದರು. ತಾವು ತಿನ್ನುವುದನ್ನೇ ತಮ್ಮ ದೇವತೆಗೂ ಬಲಿಕೊಡುತ್ತಿದ್ದರು. ಈ ಮಂದಿ ಮರಗಮ್ಮ ದೇವಿಗೆ ಬಲಿ ಕೊಡುವುದು ಆಡು ಮತ್ತು ಹೋತ. ಹಂದಿಯನ್ನೂ ಬಹಳ ಹಿಂದೆ ಕೊಡುತ್ತಿದ್ದರಂತೆ. ಆದರೆ ಈಗ ಅದನ್ನು ನಿಲ್ಲಿಸಿದ್ದಾರೆ. ಆಹಾರ

ಸಂಗ್ರಹಣೆಗಾಗಿ ಮೊದಲು ಕಾಡುಗಳಿಗೆ ತೆರಳುತ್ತಿದ್ದರು. ಆದರೆ ಈಗ ಅರಣ್ಯ ಕಾಯ್ದೆ ನೀತಿಯಾನುಸಾರ ನಿಷೇಧಿಸಿರುವುದರಿಂದ, ಅಲ್ಲಿಗೆ ಹೋಗಲು ಹಿಂದೇಟು ಹಾಕುತ್ತಾರಂತೆ.

**ವಸತಿ ವ್ಯವಸ್ಥೆ**

ದುರುಗಮುರಗಿಯರು ಸಾಮಾನ್ಯವಾಗಿ ಗುಡಾರ/ಗುಡಿಸಲು ಮತ್ತು ಡೇರೆಗಳಲ್ಲಿ ವಾಸಿಸುವರು. ಅಲೆಮಾರಿಗಳಾಗಿರುವುದರಿಂದ ಇವರು ಬಹಳ ಕಾಲ ಒಂದೆಡೆ ನಿಲ್ಲುವುದಿಲ್ಲ. ಬೇರೆ ಬೇರೆ ಊರುಗಳಿಗೆ, ಹಳ್ಳಿಗಳಿಗೆ ಹೋದಾಗಲೆಲ್ಲ ಊರಿನ ಕೊನೆಯ ಭಾಗಕ್ಕೆ ಬಯಲಿನಲ್ಲಿ ತಮ್ಮ ಗುಡಿಸಲುಗಳನ್ನು ಅಥವಾ ಟೆಂಟುಗಳನ್ನು ಹಾಕಿಕೊಳ್ಳುತ್ತಾರೆ. ತಾತ್ಕಾಲಿಕವಾಗಿಯಾದರೂ ಅವರಿಗೆ ವಾಸಿಸಲು ಮನೆಗಳು ಬೇಕಲ್ಲ. ಮನೆಗಳು ಅಂದರೆ ಕಲ್ಲು, ಮಣ್ಣಿನವುಗಳಲ್ಲ. ತೊಪ್ಪಲು, ಪೊರಕೆ ಹುಲ್ಲುಗಳ ಗುಡಿಸಲುಗಳಾದರೂ ಸರಿ. ತಾಡುಪಾಲು, ಗೋಣಿಚೀಲಗಳ ಡೇರೆಗಳಾದರೂ ಸರಿ. ಗುಡಿಸಲು ಮತ್ತು ಡೇರೆಗಳನ್ನು ತಮ್ಮದೇ ಆದ ರೀತಿಯಲ್ಲಿ ರಚಿಸಿಕೊಂಡಿರುತ್ತಾರೆ. ಇವರಿಗೆ ಸರಿಯಾದ ನೆಲೆ ಇರದೇ ಇರುವುದರಿಂದ ಸರ್ಕಾರ ನೀಡುವ ಆಶ್ರಯ ಮನೆ ಇತ್ಯಾದಿ ಸವಲತ್ತುಗಳಿಂದಲೂ ಇವರು ಭಾಗಶಃ ವಂಚಿತರಾಗಿದ್ದಾರೆ. ಇತ್ತೀಚೆಗೆ ಪಟ್ಟಣ ಪ್ರದೇಶದ ಕೆಲವು ದುರುಗ ಮುರುಗಿಯರು ಸರ್ಕಾರವು ಕಲ್ಪಿಸಿರುವ ಆಶ್ರಯ, ಅಂಬೇಡ್ಕರ್, ಜನತಾ ಇತ್ಯಾದಿ ಮನೆಗಳನ್ನು ಪಡೆಯುವಲ್ಲಿ ಯಶಸ್ವಿಯಾಗುತ್ತಿದ್ದಾರೆ. ಹಳ್ಳಿಗಳಲ್ಲಿ ವಾಸಿಸುವವರು ಇಂತಹ ಸವಲುತ್ತುಗಳನ್ನು ಪಡೆಯಲು ಅವರೆಲ್ಲರೂ ಸಂಘಟಿತರಾಗಬೇಕಾದ ಅವಶ್ಯಕತೆ ಕಂಡುಬರುತ್ತದೆ.

**ಉಡುಗೆ ತೊಡುಗೆಗಳು**

ಈ ಸಮುದಾಯದ ಪುರುಷರು ಮೊದಲೆಲ್ಲಾ ಬರೀ ಲಂಗೋಟಿಧಾರಿಗಳೇ ಆಗಿದ್ದರು. ಮೇಲೆ ಬೆತ್ತಲೆ ಮೈ. ಕ್ರಮೇಣ ಬದಲಾವಣೆ ಆಗಿ, ಲಂಗೋಟಿಗೆ ಬದಲು ಪಂಚೆ ಅಥವಾ ಧೋತಿ ಉಡುತ್ತಿದ್ದಾರೆ. ಮೇಲೆ ಮಾತ್ರ ಬಹಳ ಕಾಲ ಬರೀ ಮೈಯೇ. ಆದರೆ ಈಗೀಗ ಬಟ್ಟೆಯಿಂದ ಹೊಲೆದ ಬನೀನು ಹಾಕಿಕೊಳ್ಳುತ್ತಿದ್ದಾರೆ. ಅಂಗಿಯನ್ನು ಹಾಕಿಕೊಳ್ಳುವ ರೂಢಿಯಿದೆ. ಯುವಕರು ಪ್ಯಾಂಟು ಮತ್ತು ಶರ್ಟಗಳನ್ನು ಹಾಕಿಕೊಳ್ಳುತ್ತಿದ್ದಾರೆ.

'ಹೆಂಗಸರು ಮಲಗಂಟು ಹಾಕಿ ಮೊಣಕಾಲ ಮೇಲೆ ಸೀರೆ ಉಡುತ್ತಾರೆ. ಎಂಥ ಪೈಲ್ವಾನ ನಂಥ ಗಂಡಸು ಅವರ ಸೆರಿಗೆಗೆ ಕೈ ಹಾಕಿ ಎಳೆದರೂ ಸಹ ಆ ಸೀರೆಯ ಗಂಟಾಗಲಿ ನೆರಿಗೆಯಾಗಲಿ, ಬಿಚ್ಚುವುದು ಹೋಗಲಿ ಜರಿಯುವುದು ಇಲ್ಲವೆಂದು ಈ ಹೆಂಗಸರು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಮೇಲೆ ಕುಪ್ಪಸ. ಆದರೆ ಈಗ ಆಧುನಿಕತೆಯ ಪ್ರಭಾವದಿಂದಾಗಿ ಇವರೂ ಕೂಡ ಸಾಮಾನ್ಯರಂತೆ ಉಡುಪನ್ನು ಧರಿಸುತ್ತಿರುವುದನ್ನು ಕಾಣಬಹುದು.

**ವೇಷ ಭೂಷಣಗಳು**

ಪುರುಷರು ವೇಷ ಕಟ್ಟಿ ಪೋತುರಾಜನಾಗಿ ಕುಣಿಯಲು ಬಂದಾಗ ಅವನ ಉಡುಗೆ ಬೇರೆಯದೇ ಆಗಿರುತ್ತದೆ. ಅವನು ಸೀರೆಯನ್ನು ಲಂಗದಂತೆ ನೆರಿಗೆ ನೆರಿಗೆಯಾಗಿ ಸೊಂಟದ ಸುತ್ತಲೂ ಕಟ್ಟಿಕೊಂಡಿರುತ್ತಾನೆ. ಅದು ಮೊಣಕಾಲವರೆಗೆ ಮಾತ್ರ ಬಂದಿರುತ್ತದೆ. ಮೇಲೆ ಬರಿ ಮೈ ಇರುತ್ತದೆ. ಕಾಲಲ್ಲಿ ಗೆಜ್ಜೆ, ಕಿವಿಯಲ್ಲಿ ಓಲೆ, ರಟ್ಟೆಯಲ್ಲಿ ಕಡಗ, ಉದ್ದನೆಯ ಕೂದಲು ಬೆನ್ನ ಮೇಲೆ ಇಳಿಬಿಟ್ಟುಕೊಂಡು ವಿಚಿತ್ರವಾಗಿ ಆರ್ಭಟಿಸುತ್ತಾ ಚಾಟಿಯಿಂದ ಹೊಡೆದುಕೊಳ್ಳುತ್ತಾ ಪೂಜಾರಿ ಲಯಬದ್ಧವಾಗಿ ಹೆಜ್ಜೆಗಳನ್ನು ಹಾಕುತ್ತಾನೆ. ಅದಕ್ಕನುಸಾರವಾಗಿ ದುರುಗಮುರುಗಿ ತಾಯಿಯ ಮಹಿಮೆಯನ್ನು ರಾಗವಾಗಿ ಹಾಡುತ್ತಾನೆ. ಹೆಣ್ಣು ಮಗಳು ಉರುಮೆ ಬಾರಿಸುವುದರೊಂದಿಗೆ ದನಿಗೂಡಿಸುತ್ತಾ ಅದನ್ನು ಪುನರಾವರ್ತಿಸುತ್ತಾಳೆ. ಹೀಗೆ ಇದೊಂದು ಆಚರಣೆ ಆಗಿ ರಂಗಪ್ರದರ್ಶನವೇ ಆಗಿ ಪರಿಣಮಿಸುವುದು.

**ಕಸುಬು**

ದುರುಗಮುರುಗಿ ದೇವರನ್ನು ಹೊತ್ತುಕೊಂಡು ತಿರುಗಾಡುವುದೇ ಇವರ ಪ್ರಧಾನ ಕಸುಬಾಗಿದೆ. ಪುಟ್ಟಿಯಲ್ಲಿ ದೇವರನ್ನು ಇಟ್ಟುಕೊಂಡು ಊರಿಂದ

ಊರಿಗೆ ಅಲೆಯುತ್ತಾ ಭಕ್ತರಿಂದ ದವಸ, ಧಾನ್ಯ, ಒಡವೆ, ವಸ್ತ್ರಗಳನ್ನು ಕಾಣಿಕೆಯಾಗಿ ಪಡೆಯುತ್ತಾ ಜೀವನ ನಡೆಸುವ ದುರುಗಮುರಗಿಯರು ದೇವಿ ಆರಾಧನೆಯನ್ನೇ ಮುಖ್ಯ ಕಸುಬಾಗಿ ಹೊಂದಿದ್ದಾರೆ. ಆದರೆ ಮೂಲದಲ್ಲಿ ಮೀನುಗಾರಿಕೆಯನ್ನು ಮಾಡುತ್ತಿದ್ದುದು ತಿಳಿದುಬರುತ್ತದೆ.

ದುರುಗಮುರುಗಿಯರು ಮುಖ್ಯವಾಗಿ ಭಿಕ್ಷಾಟನೆಯನ್ನೇ ಅವಲಂಬಿಸಿರುವ ಅಲೆಮಾರಿ ಸಮುದಾಯ. ಇವರಿಗೆ ಕೃಷಿ ಭೂಮಿ ಇಲ್ಲವೆಂದೇ ಹೇಳಬಹುದು. ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ಆಡೂರು ಮತ್ತು ಕಾಲ್ವೇ ಕಲ್ಲಾಪುರದಲ್ಲಿ ನೆಲೆಸಿದ್ದ ದುರುಗಪ್ಪ ಆನಂದಪ್ಪ ದುರುಗಮುರಗಿಯು ಕೆಲವು ಕುರಿ–ಮೇಕೆಗಳನ್ನು ಹೊಂದಿರುವುದು ಸಮೀಕ್ಷೆಯಿಂದ ತಿಳಿದು ಬರುತ್ತದೆ. ಇತ್ತೀಚೆಗಷ್ಟೆ ಕೆಲವರು ಅಲ್ಪ ಪ್ರಮಾಣದಲ್ಲಿ ನಾಟಿ ಕೋಳಿಗಳನ್ನು ತಮ್ಮ ಆಹಾರಕ್ಕಾಗಿ ಸಾಕಣಿಕೆ ಮಾಡುತ್ತಿದ್ದಾರೆ. ಹೀಗೆ ಸಾಕಿದ ಕೋಳಿಗಳು ಹೆಚ್ಚಾದಾಗ ಸಂತೆಗಳಿಗೆ ಕೋಳಿಗಳನ್ನು ಒಯ್ದು ಮಾರಾಟ ಮಾಡುವುದುಂಟು.

ಇತ್ತೀಚೆಗೆ ಈ ಸಮುದಾಯದ ಯುವಕ ಮತ್ತು ಯುವತಿಯರು ಪ್ಲಾಸ್ಟಿಕ್ ಕೊಡಗಳನ್ನು, ಅಲ್ಯೂಮಿನಿಯಂ ಪಾತ್ರೆಗಳನ್ನು ಅಂಗಡಿಗಳಿಂದ ಪಡೆದು ಹಳ್ಳಿಗಳಿಗೆ ಹೋಗಿ ಮಾರುವುದುಂಟು. ಇಂತಹ ವ್ಯಾಪಾರದಿಂದ ಅತ್ಯಲ್ಪ ಲಾಭ ಪಡೆಯುವುದುಂಟು. ಮೀನು ಹಿಡಿಯುವ ಕೂಲಿ ಕೆಲಸಕ್ಕೂ ದುರುಗಮುರುಗಿ ಗಂಡಸರು ಹೋಗುತ್ತಾರೆ. ಇದರಿಂದಾಗಿ ಅವರಿಗೆ ಕೂಲಿ ಜೊತೆಗೆ ಸ್ವಲ್ಪ ಪ್ರಮಾಣದಲ್ಲಿ ಮೀನು ಆಹಾರಕ್ಕಾಗಿ ದೊರೆಯುತ್ತದೆ. ಅರೆ ಮಲೆನಾಡು ಪ್ರದೇಶಗಳಲ್ಲಿ ಕೃಷಿ ಹಾಗೂ ಕೃಷಿಯೇತರ ಕೂಲಿಗಳಿಗಾಗಿ ಹೋಗುವುದು ಬಹಳ ಕಡಿಮೆ. ಈ ಎಲ್ಲಾ ಕೆಲಸಗಳನ್ನು ಅವಲಂಬಿಸಿದರೂ ಇವರು ಭಿಕ್ಷಾಟನಾ ವೃತ್ತಿಯನ್ನು ಮಾತ್ರ ಬಿಡಲಾರರು. ಅವರಿಗೆ ಅದು ಒಂದು ಧಾರ್ಮಿಕ ಆಚರಣೆಯಾಗಿದೆ.

**ಆಚರಣೆ ಮತ್ತು ನಂಬಿಕೆಗಳು**

**ಜನನ:** ದುರುಗಮುರಗಿ ಜನರಲ್ಲಿ ಮಗುವಿನ ಜನನ ಕಾಲದಲ್ಲಿ ಆಚರಿಸುವ ಆಚರಣೆಗಳು ಮತ್ತು ಸಂಪ್ರದಾಯಗಳು ತುಂಬಾ ಕಟ್ಟು ನಿಟ್ಟಾಗಿವೆ. ಗರ್ಭಿಣಿಯಾದ ಸುದ್ದಿಯನ್ನು ತವರು ಮನೆಯವರಿಗೆ ತಿಳಿಸುತ್ತಾರೆ. ಆದರೆ ಹೆರಿಗೆ ಮಾತ್ರ ಗಂಡನ ಮನೆಯಲ್ಲಿ ಆಗುವುದು. ಗರ್ಭಿಣಿ ಮಹಿಳೆಗೆ ಪ್ರತ್ಯೇಕ ಗುಡಾರ ಇರುವುದು. ಗುಡಾರದ ಒಳಗೆ ಚಾಪೆ, ಹಳೆ ಬಟ್ಟೆಗಳು, ಕೌದಿ, ಕೊಬ್ಬರಿ ಎಣ್ಣೆ, ಮೊರ, ಬಿಸಿನೀರಿನ ಗಡಿಗೆ ಇತ್ಯಾದಿ ಸಾಮಾನುಗಳು ಇರುತ್ತವೆ. ಗರ್ಭಿಣಿ ಹೆಂಗಸಿಗೆ ನೋವು ಕಂಡಾಗ, ಸಮುದಾಯದ ಅನುಭವಸ್ಥ ಸೂಲಗಿತ್ತಿಯ ಮೂಲಕ ಹೆರಿಗೆ ಮಾಡಿಸುತ್ತಾರೆ. ನಂತರ ಸ್ನಾನ ಮಾಡಿಸಿ ಒಳಗೆ ಕರೆದುಕೊಳ್ಳುತ್ತಾರೆ. ಹದಿನಾರು ದಿನಗಳವರೆಗೆ ಮಗು ಹಾಗೂ ಬಾಣಂತಿಯ ಆರೈಕೆಯನ್ನು ಸೂಲಗಿತ್ತಿ ಮಾಡುತ್ತಾಳೆ.

ಮಗು ಹುಟ್ಟಿದ ತರುವಾಯ ಮುಖ್ಯಸ್ಥರುಗಳಿಗೆ ಕುಲದೈವದ ಪ್ರಕಾರ ಟೀ, ಸರಾಯಿ ಕುಡಿಸಲಾಗುತ್ತದೆ. ಮೂರು ದಿವಸಗಳಾದ ನಂತರ ಗುಡಾರದ ಒಳಗಡೆ ಸಗಣಿ ನೀರಿನಿಂದ ನೆಲ ಸಾರಿಸಲಾಗುತ್ತದೆ. ಚಾಪೆ ಮೇಲೆ ಹಾಕಿರುವ ಮಗುವನ್ನು ಮೂರನೇ ದಿನ ಮೊರದಲ್ಲಿ ಹಾಕಲಾಗುವುದು. ಬಾಣಂತಿಗೆ ವಿಶೇಷವಾಗಿ ಮೀನು, ಮಾಂಸದ ಅಡುಗೆ, ಮಾಡಿ ಆರೈಕೆ ಮಾಡುತ್ತಾರೆ. ಉತ್ತಮ ಸ್ಥಿತಿಯಲ್ಲಿರುವವರು ದಿನಾಲು ಬೆಳಗ್ಗೆ ಬಾಣಂತಿಗೆ 'ಖಾರ' (ಕೊಬ್ಬರಿ, ಉತ್ತತ್ತಿ, ಅಂಟು, ಮೆಣಸು, ಬೆಲ್ಲ, ಇತ್ಯಾದಿ ವಸ್ತುಗಳಿಂದ ತಯಾರಿಸಿರುತ್ತಾರೆ.) ವನ್ನು ತಿನ್ನಲು ಕೊಡುತ್ತಾರೆ. ಹುಟ್ಟಿದ ಮೂರು ಅಥವಾ ಒಂಭತ್ತು ದಿವಸಕ್ಕೆ ಮಗುವಿಗೆ ಹೆಸರಿಡುತ್ತಾರೆ. ಇವರು ಹೆಚ್ಚಾಗಿ ಬೆಡಗಿಗೆ ಮತ್ತು ಕುಲದೇವತೆಗೆ ಸಂಬಂಧಿಸಿದ ಹೆಸರುಗಳನ್ನಿಡುತ್ತಾರೆ. ಇಲ್ಲವೆ ಕುಟುಂಬದ ಹಿರಿಯರ ಹೆಸರಿಡುವುದು ರೂಢಿಯಲ್ಲಿದೆ. ಉದಾಹರಣೆಗೆ, ದ್ಯಾಮಪ್ಪ, ಗಾಳೆಪ್ಪ, ದುರ್ಗಪ್ಪ, ರಾವುಲೋಪ್ಪ ಇತ್ಯಾದಿ.

**ಋತುಮತಿ:** ಹೆಣ್ಣು ಋತುಮತಿಯಾದ ನಂತರ ಪ್ರತ್ಯೇಕ ಗುಡಿಸಲಿನಲ್ಲಿ ಬಿಡುತ್ತಾರೆ. ಈ ಹೆಣ್ಣು ಯಾರ ಕಣ್ಣಿಗೂ ಬೀಳದಂತೆ ನೋಡಿಕೊಳ್ಳಲಾಗುತ್ತದೆ. ಗುಡಿಸಿಲಿನ ಒಳಗೆ ಅವಳಿಗೆ ಅವಶ್ಯಕವಾದ ಹಳೇ ಚಾಪೆ, ಹೊದಿಗೆ, ಬಟ್ಟೆ, ಕನ್ನಡಿ, ಕಸಬರಿಗೆ, ಸೀಮೆಎಣ್ಣೆ ದೀಪ, ತಂಬಿಗೆ, ಲೋಟ, ತಟ್ಟೆ ಇತ್ಯಾದಿಗಳನ್ನು ಇಡಲಾಗುತ್ತದೆ. ಮೈ ನೆರೆದ ಹುಡುಗಿ ಮನೆಯಲ್ಲಿ ಓಡಾಡುವರನ್ನು ಮುಟ್ಟುವಂತಿಲ್ಲ. ಇವಳ ಮೇಲ್ವಿಚಾರಣೆಗಾಗಿ ಅಂದರೆ ನೀರೆರೆಯಲು, ಆಹಾರ ಪತ್ಯಗಳನ್ನು ನೋಡಲು ಅದೇ ಸಮುದಾಯದ ಹಿರಿಯ ಹೆಂಗಸರಲ್ಲಿ ಒಬ್ಬಳು ವಹಿಸಿರುತ್ತಾರೆ. ಋತುಮತಿಯಾದ ಹುಡುಗಿಯನ್ನು ಒಂಬತ್ತು ದಿನಗಳವರೆಗೆ ಗುಡಿಸಿಲಿನಲ್ಲಿಯೇ ಇರಿಸಲಾಗುತ್ತದೆ. ಒಂಬತ್ತನೇ ದಿನದಲ್ಲಿ ಹುಡುಗಿಗೆ ಸ್ನಾನ ಮಾಡಿಸಲಾಗುತ್ತದೆ. ಇದನ್ನು 'ಮುಟ್ಟು ನೀರು ಎರೆಯುವುದು' ಎಂದು ಕರೆಯುತ್ತಾರೆ. ನೀರೆರೆದ ನಂತರ ಹಸಿರು ಮರಕ್ಕೆ (ಬೇವಿನ ಮರ ಇಲ್ಲವೆ ಜಾಲಿಮರ) ಪೂಜೆ ಮಾಡಿ, ಕೈ ಮುಗಿಸಿ ವಾಸದ ಮನೆ ಒಳಗೆ ಕರೆತರಲಾಗುತ್ತದೆ. ಒಂಬತ್ತನೇ ದಿನವೇ ಹುಡುಗಿಯನ್ನು ಪ್ರತ್ಯೇಕವಾಗಿ ಇಡಲು ತಯಾರಿಸಿದ್ದ ಗುಡಿಸಿಲನ್ನು ಹುಡುಗಿಯ ತಂದೆ ತಾಯಿಯರು ನಾಶ ಗೊಳಿಸುತ್ತಾರೆ. ಕುಲ ಪಂಚಾಯಿತಿಯ ನಿಯಮದಂತೆ, ಹುಡುಗಿ ಋತುಮತಿಯಾದ ವಿಷಯವನ್ನು ತಮ್ಮ ಸಮುದಾಯದ ಜನರಿಗೆ ತಿಳಿಸಬೇಕು.

**ಮದುವೆ:** ವಿವಾಹದಲ್ಲಿ ಗಂಡಿಗೆ ಹೆಣ್ಣನ್ನು ನೋಡುವ, ನಿಶ್ಚಯಿಸುವ ಕಾರ್ಯವನ್ನು ಮನೆಯ ಹಿರಿಯರೇ ಮಾಡುತ್ತಾರೆ. ಸಾಮಾನ್ಯವಾಗಿ ಹೆಣ್ಣನ್ನು ತಮ್ಮ ಹತ್ತಿರದ ರಕ್ತ ಸಂಬಂಧಿಗಳಲ್ಲಿ ನೋಡುವುದು ಹೆಚ್ಚು. ಹಿರಿಯರು ಮಾತು ಮುಗಿಸಿದರೆ ಹೆಣ್ಣು-ಗಂಡು ಒಪ್ಪಲೇ ಬೇಕು. ಒಪ್ಪುತ್ತಾರೆ. ಈ ಸಮುದಾಯದ ಮತ್ತೊಂದು ವಿಶೇಷವೆಂದರೆ, ವರನು ವಿವಾಹ ಮೊದಲು ಒಂದು ತಿಂಗಳು ಕನ್ಯೆದವರ ಮನೆಯಲ್ಲಿ ಇರಬೇಕು. ವಿವಾಹವಾದ ನಂತರವೂ ವರ ಕನ್ಯೆಯ ಮನೆಯಲ್ಲಿ ಸುಮಾರು ನಾಲ್ಕು ತಿಂಗಳು ಇರಬೇಕು. ಈ ಸಂದರ್ಭದಲ್ಲಿ ವರನಾದವನು, ವಧುವಿನ ತಂದೆ-ತಾಯಿಗಳ ವಿಶ್ವಾಸವನ್ನು ಗಳಿಸಬೇಕು. ಅಳಿಯನಾದವನು ಈ ವಿಶ್ವಾಸ ಸಂಬಂಧವನ್ನು ಗಳಿಸಲು ವಿಫಲನಾದರೆ, ಆತನಿಗೆ ತನ್ನ ಮಗಳನ್ನು ಕೊಡುವುದಿಲ್ಲ ಎನ್ನಬಹುದು ಅಥವಾ ಹುಡುಗಿಯೇ ಗಂಡನನ್ನು ಒಲ್ಲೆ ಎನ್ನಬಹುದು. ಆದರೆ ಮದುವೆಗೆ ಗಂಡಿನವರು ಖರ್ಚುಮಾಡಿದ ಹಣವನ್ನು ಸಂಪೂರ್ಣವಾಗಿ ಹೆಣ್ಣಿನ ಕಡೆಯವರು ಕಡ್ಡಾಯವಾಗಿ ಸಂದಾಯ ಮಾಡಬೇಕು. ಬಿಡುಗಡೆ ಆದ ನಂತರ ಹುಡುಗಿಯನ್ನು ಬೇರೆ ಹುಡುಗನಿಗೆ 'ಉಡುಕಿ' ಎಂದು ಮಾಡಿಕೊಡುತ್ತಾರೆ. ಗಂಡು ಮದುವೆಯಾದ ನಂತರ ಹೆಂಡತಿ ಬೇಡವೆಂದರೆ, ಅವರ ಸೀರೆ ಸೆರಗಿಗೆ ಎರಡು ರೂಪಾಯಿ ಕಟ್ಟಿ ಬಂದರೆ ತಾಳಿ ಹರಿದು ಬಿದ್ದಂತೆ. ಹರೆಯದಲ್ಲಿಯೇ ಗಂಡನನ್ನು ಕಳೆದುಕೊಂಡರೆ, ಹೆಣ್ಣು ಮತ್ತೊಂದು ಮದುವೆ ಆಗುವ ಪದ್ಧತಿ ಇದೆ. ಆದರೆ ಮೊದಲಿನ ಮದುವೆಯಂತೆ ವಿಜೃಂಭಣೆಯಿಂದ ರಾಜಾರೋಷವಾಗಿ ನಡೆಯುವುದಿಲ್ಲ. ರಾತ್ರಿ ವೇಳೆಯೇ ಮದುವೆ (ಸೀರುಡಿಕೆ) ಮಾಡಿಸುವುದುಂಟು. ಉಳಿದಂತೆ ಮದುವೆಯ ಎಲ್ಲಾ ಸಂಪ್ರದಾಯಗಳು ಹಿಂದೂ ಧರ್ಮದಂತೆ ಜರುಗುತ್ತವೆ.

**ಪ್ರಚಲಿತ ಸಾಮಾಜಿಕ ಸ್ಥಿತಿಗತಿಗಳು**

ದುರುಗಮುರಗಿಯರು ಇಂದಿಗೂ ಅಸಮಾನತೆ ಮತ್ತು ಅಸ್ಪೃಶ್ಯತೆಯ ನೋವುಗಳನ್ನು ಅನುಭವಿಸುತ್ತಿದ್ದಾರೆ. ಇತರೆ ಸಮುದಾಯದವರಂತೆ ಮುಕ್ತವಾಗಿ ಜೀವನ ನಡೆಸಲು ಆಗುತ್ತಿಲ್ಲ. ಒಳಗೊಳಗೆ ಸಾಮಾಜಿಕ ಹಿಂದುಳಿಯುವಿಕೆ ಅವರಿಗೆ ನೋವಾಗಿ ಕಾಡುತ್ತಿದೆ. ಅನ್ಯ ಸಮಾಜಗಳು ಇವರಿಂದ ಕೇವಲ ಮನೋರಂಜನೆ ಪಡೆಯುತ್ತಾರೆ ವಿನಃ ಅವರಾರು ಕೂಡ ತಮ್ಮವರೆಂಬ ಮನೋಭಾವವನ್ನು ಹೊಂದಿರುವುದಿಲ್ಲ.

ದುರುಗಮುರುಗಿಯರ ಆರ್ಥಿಕ ಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಮೊದಲೆಲ್ಲಾ ಅವರಿಗೆ ಸಾಕಷ್ಟು ಕಾಳು ಕಡಿ, ಹಳೆಯ ಬಟ್ಟೆ, ದೇವತೆಗೆ ಬೆಳ್ಳಿಯ ವಸ್ತುಗಳನ್ನು ಕೊಡುತ್ತಿದ್ದರು. ಆ ಮುಖಾಂತರ ಅವರ ಆರ್ಥಿಕ ಸ್ಥಿತಿ ಸುಧಾರಿಸುತ್ತಿತ್ತು. ಇತ್ತೀಚೆಗೆ ಅವುಗಳೆಲ್ಲವು ಕಡಿಮೆಯಾಗುತ್ತಿವೆ. ಕೆಲವು ಕಡೆ ಏನನ್ನೂ ಕಾಣಿಕೆ ಹಾಕದೇ ಕಳುಹಿಸುವ ಸ್ಥಿತಿಗಳಿವೆ. ಹೊಟ್ಟೆ ತುಂಬಿಸಿಕೊಳ್ಳುವುದಕ್ಕಾಗಿ ಕೂಲಿಕೆಲಸ, ಕಟ್ಟಡ ಕೆಲಸ, ಸಣ್ಣಪುಟ್ಟ ವ್ಯಾಪಾರ, ಹಮಾಲಿ ಕೆಲಸ, ಹೋಟೆಲಿನಲ್ಲಿ ಕಪ್ಪುಬಸಿ ತೊಳೆಯುವ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಇಂದಿಗೂ ಈ ಸಮುದಾಯದಲ್ಲಿ ಅಧಿಕ ಸಂಖ್ಯೆಯ ಜನರು ಭಿಕ್ಷಾಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕೂಲಿ ಮಾಡುವವರ ಸಂಖ್ಯೆಯೂ ಹೆಚ್ಚಿರುವುದು ಕಂಡುಬರುತ್ತದೆ.ಸರ್ಕಾರಿ ನೌಕರಿಯಂತ ಇಲ್ಲವೇ ಇಲ್ಲ. ಕೇವಲ ಐದು ಮಂದಿ ಖಾಸಗಿ ನೌಕರಿಯಲ್ಲಿರುವುದು ವಕ್ತೃಗಳು ನೀಡಿದ ಮಾಹಿತಿ ಮೂಲಕ ಗೊತ್ತಾಯಿತು. ತಮ್ಮ ಜೀವನ ನಿರ್ವಹಣೆಗಾಗಿ ಬೇರೆ ವೃತ್ತಿಗಳನ್ನು ಅವಲಂಬಿಸಿರುತ್ತಾರೆ.

**ಸುಧಾರಿಸಲು ಕೈಗೊಳ್ಳಬೇಕಾದ ಕ್ರಮಗಳು:**

1. ದುರುಗಮುರುಗಿ ಸಮುದಾಯವು ಕಡುಬಡತನದಲ್ಲಿದೆ. ಇವರು ಗುಡಿಸಲು, ಗುಡಾರ, ಟೆಂಟುಗಳಲ್ಲಿ ವಾಸಿಸುತ್ತಿದ್ದಾರೆ. ಇವರ ಎಲ್ಲ ಕುಟುಂಬಗಳಿಗೆ ತಲೆಯ ಮೇಲೊಂದು ಸೂರು ನೀಡಬೇಕಾಗಿದೆ.
2. ಹಾವೇರಿ ಜಿಲ್ಲೆಯಲ್ಲಿ ವಾಲ್ಮೀಕಿ ಜನಾಂಗದ ಹೆಸರಿನಲ್ಲಿ ಪರಿಶಿಷ್ಟ ಪಂಗಡದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತಾರೆ. ಆದರೆ 'ಬಳ್ಳಾರಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಪರಿಶಿಷ್ಟ ಜಾತಿಯ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದಾರೆ. ಉಳಿದ ಎಲ್ಲಾ ಜಿಲ್ಲೆಗಳಲ್ಲಿ ನೀಡುವುದು ಅಗತ್ಯವಾಗಿದೆ. ಈ ಗೊಂದಲವನ್ನು ನಿವಾರಿಸಬೇಕಿದೆ.
3. ಮಕ್ಕಳಿಗೆ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೂ ಶಿಷ್ಯವೇತನ, ಹಾಸ್ಟೆಲ್, ಇನ್ನಿತರ ಧನಸಹಾಯವನ್ನು ನೀಡಬೇಕಾಗಿದೆ.
4. ಭಿಕ್ಷೆಯಿಂದ ಜೀವನ ಮಾಡುತ್ತಿರುವ ಈ ಸಮುದಾಯಕ್ಕೆ ಪಡಿತರ ಚೀಟಿಯನ್ನು ಪ್ರತಿಯೊಂದು ಕುಟುಂಬಗಳಿಗೆ ನೀಡಬೇಕಿದೆ.
5. ದೀಪ ವ್ಯವಸ್ಥೆ ಇರುವುದಿಲ್ಲ. ಭಾಗ್ಯ ಜ್ಯೋತಿ ದೀಪದ ವ್ಯವಸ್ಥೆ ಕಲ್ಪಿಸಬೇಕಾಗಿದೆ.
6. ಇವರನ್ನು ಒಕ್ಕಲೆಬ್ಬಿಸುವ ಪ್ರಯತ್ನಗಳು ಭೂ ಮಾಲಿಕರಿಂದ ಮತ್ತು ಸರಕಾರದಿಂದ ಸತತವಾಗಿ ನಡೆಯುತ್ತಿವೆ. ಇದನ್ನು ತಕ್ಷಣ ನಿಲ್ಲಿಸಬೇಕಾಗಿದೆ. ಹಾಗೂ ಇವರಿಗೆ ಪ್ರರ್ಯಾಯ ವ್ಯವಸ್ಥೆಯನ್ನು ಕಲ್ಪಿಸಬೇಕಾಗಿದೆ.
7. ಸ್ವ ಉದ್ಯೋಗ ಕೈಗೊಳ್ಳಲು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲದ ಸೌಲಭ್ಯವನ್ನು ಕಲ್ಪಿಸುವುದು ಸೂಕ್ತ. ಇದರಿಂದ ಭಿಕ್ಷಾಟನೆ ಕಡಿಮೆಯಾಗಬಹುದು.
8. ಮಹಿಳೆಯರ ಸಬಲೀಕರಣಕ್ಕಾಗಿ ಎಲ್ಲಾ ರೀತಿಯ ನೆರವನ್ನುವನ್ನು ನೀಡಬೇಕಾಗಿದೆ.
9. ದುರುಗಮುರುಗಿಯರ ಕುಣಿತ, ಹಾಡು, ಪ್ರದರ್ಶನಗಳಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರೋತ್ಸಾಹ ದೊರೆಯುವಂತಾಗಬೇಕು.
10. ನಿರ್ಲಕ್ಷಿತ ವೃದ್ಧರು, ಅಂಗವಿಕಲರು ಹಾಗೂ ವಿಧವೆಯರಿಗೆ ಮಾಸಿಕ ವೇತನ ಕಲ್ಪಿಸಬೇಕಾಗಿದೆ, ಇತ್ಯಾದಿ.

ದುರುಗಮುರಗಿ ಸಮುದಾಯವು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಸಾಧಿಸಿರುವುದು ಶೂನ್ಯ ಎನ್ನಬಹುದು. ಇಂದಿಗೂ ಬದುಕಿಗಾಗಿ

ಅಲೆಮಾರಿಯ ಜೀವನ ತಪ್ಪಿಲ್ಲ. ಬಹುತೇಕ ಜನರು ಗುಡಾರಗಳಲ್ಲಿ ವಾಸಿಸುತ್ತಿದ್ದಾರೆ. ಭಿಕ್ಷಾ ವೃತ್ತಿಯಿಂದ ಅವಮಾನ ಮತ್ತು ಅತಂತ್ರದ ಬದುಕು ನಡೆಸುತ್ತಿದ್ದಾರೆ. ಭಾರತದ ಮೂಲ ನಿವಾಸಿಗಳಾದರೂ ಎರಡನೇ ದರ್ಜೆಯ ಪ್ರಜೆಗಳಂತೆ ಕಡೆಗಣಿಸಲ್ಪಟ್ಟಿದ್ದಾರೆ. ಇಡೀ ಬದುಕು ಧಾರ್ಮಿಕ ಭಿಕ್ಷಾವೃತ್ತಿಯಿಂದ ಕಾಲ ಕಳೆಯುತ್ತಿದ್ದಾರೆ. ಇಂದು ಇತರ ಸಮಾಜಗಳಿಗೆ ಮತ್ತು ಸರ್ಕಾರಕ್ಕೆ ದುರುಗಮುರುಗಿ ಸಮಾಜದ ಧಾರ್ಮಿಕ ಭಿಕ್ಷಾವೃತ್ತಿ ಬೇಡವಾಗಿದೆ. ಇದರಿಂದ ಈ ಸಂಪ್ರದಾಯ ಮಾಯವಾಗುವುದರಲ್ಲಿ ಸಂದೇಹವಿಲ್ಲ.

**ಪರಾಮರ್ಶನ ಗ್ರಂಥಗಳು**


- ಆರಾಧ್ಯ, ಬಿ.ಎಂ.ಎಂ. (1985). ಪರಿಶಿಷ್ಟ ಜನಾಂಗದವರಿಗೆ ಸಂವಿಧಾನದ ಕೊಡುಗೆ: ಅಪ್ಪು ಪ್ರಕಾಶನ.
- ಬಾಲಗುರುಮೂರ್ತಿ & ಪ್ರತಾಪ. (2008). *ಬಹುರೂಪಿ: ಬುಡ್ಗ ಜಂಗಮ.* ಕನ್ನಡ ಪುಸ್ತಕ ಪ್ರಾಧಿಕಾರ.
- ಚಲುವರಾಜು. (1993). *ದಕ್ಕಲರ ಸಂಸ್ಕೃತಿ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಗೀತ ನಾಗಭೂಷಣ. (1993). *ದುರುಗ ಮುರುಗಿಯರ ಸಂಸ್ಕೃತಿ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಗಂಗಾಧರ ದೈವಜ್ಞ. (2000). *ಬುಡಗ ಜಂಗಾಲರು.* **ಇನ್.** ಲಕ್ಕಪ್ಪಗೌಡ, ಎಚ್.ಜೆ., (ಪ್ರ.ಸಂ.) *ಕರ್ನಾಟಕ ಬುಡಕಟ್ಟುಗಳು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.* 625.
- ಕರ್ನಾಟಕ ಕನ್ನಡ ವಿಶ್ವಕೋಶ. (1979) ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿದ್ಯಾಲಯ
- ಕೃಷ್ಣರಾಯ, ಶಾ.ಮಂ. (1981). *ಹಾವನೂರು ಸಂಸ್ಥಾನ.* ಐಬಿಎಚ್ ಪ್ರಕಾಶನ.
- ಲಕ್ಕಪ್ಪಗೌಡ, ಎಚ್.ಜೆ., (ಪ್ರ.ಸಂ.) (2000). *ಕರ್ನಾಟಕ ಬುಡಕಟ್ಟುಗಳು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.* ಬೆಂಗಳೂರು.
- ಲಕ್ಕಪ್ಪಗೌಡ. ಎಚ್.ಜೆ. (ಸಂ.) (1994). *ಕರ್ನಾಟಕದ ಬುಡಕಟ್ಟು–ಸಂಪುಟ–2* ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.
- ಲಕ್ಷ್ಮಣ ತೆಲಗಾವಿ. (2000). ಹಿಂದುಳಿದ ವರ್ಗಗಳ ಮತ್ತು ದಲಿತ ಚಳುವಳಿಗಳು. ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ.
- ಪ್ರಭಾಕರ ಎ.ಎಸ್. (2008). *ಆದಿವಾಸಿ ಆಖ್ಯಾನ: ಸಮುದಾಯಗಳ ಅಧ್ಯಯನಕ್ಕೊಂದು ಆಕರ.* ಸಿದ್ಧಾರ್ಥ ಪ್ರಕಾಶನ.
- ಯಳನಾಡು ಅಂಜನಪ್ಪ. (2000). *ಹಗಲು ವೇಷದವರು.* **ಇನ್.** ಲಕ್ಕಪ್ಪಗೌಡ, ಎಚ್.ಜೆ., (ಪ್ರ.ಸಂ.) *ಕರ್ನಾಟಕ ಬುಡಕಟ್ಟುಗಳು. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.* 457.
- Edgar Thurston and K. Rangachari. (1987). Caste and Tribes of Southern India, Vol-I, II, III, IV, V, Asian Educational Services.
- Singh. K.S. (2003). *People of India, Nation Series*, V-XXVI Part-2, The Scheduled Tribes, Neilobrin Oxford University Press.